ದಿಃ 29.01.2026

**ಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 1643/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಾರುತಿ.ಎಂ | ಪ್ರಾ.ಸಾಃ 3 |
| ತಂದೆಯ/ಗಂಡನ ಹೆಸರು | : | ಮಂಜಣ್ಣ | ಚಾಸಾಃ 3 |
| ವಯಸ್ಸು | : | 37 ವರ್ಷ | |
| ಕೆಲಸ | : | ಅಬಕಾರಿ ಪೇದೆ, ಅಬಕಾರಿ ನಿರೀಕ್ಷಕರ ಕಛೇರಿ, | ಸಾ ಪ್ರ ಬೋ |
| ವಾಸ | : | ಹೊಳಲ್ಕೆರೆ | ದಿಃ29.01.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ನಾನು ದಿನಾಂಕ 16.09.2019 ರಿಂದ ಇಲ್ಲಿಯವರೆಗೆ ಹೊಳಲ್ಕೆರೆ ಅಬಕಾರಿ ನಿರೀಕ್ಷಕರ ಕಛೇರಿಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ 28.03.2024 ರಂದು 2024 ರ ಸಾರ್ವತ್ರಿಕ ಲೋಕಸಭಾ ಚುನಾವಣೆ ನಡೆಯುತ್ತಿದ್ದು, ಆ ನಿಮಿತ್ತ ನೀತಿ ಸಂಹಿತೆ ಜಾರಿಯಲ್ಲಿತ್ತು. ಮಾನ್ಯ ಅಬಕಾರಿ ಉಪ ಆಯುಕ್ತರು, ಚಿತ್ರದುರ್ಗ ರವರ ನಿರ್ಧೇಶನದ ಮೇರೆಗೆ ಹಾಗೂ ಅಬಕಾರಿ ಉಪ ಅಧೀಕ್ಷಕರು, ಚಿತ್ರದುರ್ಗ ರವರ ಮಾರ್ಗದರ್ಶನದ ಮೇರೆಗೆ ಚಾಸಾ.5 ಮತ್ತು ನಾನು ಗಸ್ತು ಕರ್ತವ್ಯದಲ್ಲಿ ಇದ್ದೆವು. ನಮ್ಮ ಇಲಾಖಾ ವಾಹನ ನಂ.ಕೆ.ಎ.16/ಜಿ-0812 ರ ಹೋಂಡಾ ಶೈನ್ ವಾಹನದಲ್ಲಿ ಹೊಳಲ್ಕೆರೆ ತಾಲ್ಲೂಕಿನ ಗುಂಡೇರಿ ಗ್ರಾಮದ ಹಾವಿನಹಟ್ಟಿ ಗ್ರಾಮದ ಕಡೆಗೆ ಹೋಗುವ ರಸ್ತೆಯ ಮಾರ್ಗದಲ್ಲಿ ನಿಂತಿದ್ದ ಚಾಸಾ.1 ಮತ್ತು 2 ರವರನ್ನು ಕರೆದುಕೊಂಡು ನಾವು ರಸ್ತೆಯಲ್ಲಿ ಅಬಕಾರಿ ಗಸ್ತು ಕರ್ತವ್ಯವನ್ನು ಮಾಡುತ್ತಿದ್ದು, ರಸ್ತೆಯಲ್ಲಿ ಅಕ್ರಮ ಮಧ್ಯ ಮಾರಾಟದ ಕುರಿತು ಕಂಡುಬಂದಲ್ಲಿ ತನಿಖೆಗೆ ಸಹಕರಿಸುವಂತೆ ಕೋರಿರುತ್ತೇವೆ. ಆ ಕುರಿತು ಚಾಸಾ.5 ರವರು ಚಾಸಾ.1 ಮತ್ತು 2 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ನೋಟೀಸನ್ನು ನೀಡಿರುತ್ತಾರೆ. ಸ್ವಲ್ಪ ಸಮಯದ ನಂತರ ಗುಂಡೇರಿ ಗ್ರಾಮದ ಕಡೆಯಿಂದ ಹಾವಿನಹಟ್ಟಿ ಗ್ರಾಮದ ಕಡೆಗೆ ಓರ್ವ ವ್ಯಕ್ತಿ ಕೆ.ಎ.-16/ಎಲ್.-1505 ರ ಬೈಕಿನಲ್ಲಿ ಬರುತ್ತಿದ್ದು, ಆತನು ತನ್ನ ಬೈಕಿನಲ್ಲಿ ಚೀಲವನ್ನು ಇಟ್ಟುಕೊಂಡು ಬರುತ್ತಿದ್ದನು. ನಾನು ಮತ್ತು ಚಾಸಾ.5 ರವರು ಸದರಿ ವ್ಯಕ್ತಿಯನ್ನು ತಡೆದು ನಿಲ್ಲಿಸಿ, ಆತನ ಬಳಿ ಇದ್ದ ಚೀಲವನ್ನು ಪರಿಶೀಲಿಸಲಾಗಿ, ಸದರಿ ವ್ಯಕ್ತಿ ಯಾವುದೇ ಉತ್ತರವನ್ನು ನೀಡದೆ ಗಾಬರಿಯಾಗಿರುತ್ತಾರೆ. ಸದರಿ ಚೀಲವನ್ನು ಪರಿಶೀಲಿಸಲು ನ್ಯಾಯಾಲಯದಿಂದ ಶೋಧನಾ ವಾರೆಂಟ್‌ನ್ನು ಪಡೆಯಲು ಸಾಧ್ಯವಾಗದ ಕಾರಣ ಆ ಕುರಿತು ಚಾಸಾ.1 ಮತ್ತು 2 ರವರಿಗೆ ನೋಟೀಸನ್ನು ನೀಡಿ ಸದರಿ ಚೀಲವನ್ನು ಪರಿಶೀಲನೆ ಮಾಡಿರುತ್ತೇವೆ. ಸದರಿ ಚೀಲವನ್ನು ಪರಿಶೀಲಿಸಿದಾಗ, 90 ಎಂ.ಎಲ್.ನ 96 ಒರಿಜನಲ್

ಚಾಯ್ಸ್ ವಿಸ್ಕಿಯ ಟೆಟ್ರಾ ಪ್ಯಾಕೇಟ್‌ಗಳು ಇತ್ತು. ಸದರಿ ವ್ಯಕ್ತಿಯನ್ನು ಮಧ್ಯವನ್ನು ಸಾಗಾಣಿಕೆ ಮಾಡಲು ಪರವಾನಗಿ ಇದೆಯೇ ಎಂದು ಕೇಳಲಾಗಿ, ಇಲ್ಲ ಎಂದು ಹೇಳಿರುತ್ತಾರೆ. ಸದರಿ ವ್ಯಕ್ತಿಯ ವಾಹನವನ್ನು ಮತ್ತು ಚೀಲವನ್ನು ಪರಿಶೀಲಿಸಿರುತ್ತೇವೆ. ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಕರಿಯಪ್ಪ ಟಿ, ಬೊಮ್ಮನಕಟ್ಟೆ ಗ್ರಾಮ ಎಂದು ತಿಳಿಸಿರುತ್ತಾರೆ. ನಂತರ ಚಾಸಾ.1 ಮತ್ತು 2 ರವರ ಸಮಕ್ಷಮ ಆರೋಪಿತನಿಂದ ಮಧ್ಯದ ಪೌಚುಗಳನ್ನು ಅಮಾನತ್ತುಪಡಿಸಿಕೊಂಡು ಬೆಳಗ್ಗೆ 11.30 ರಿಂದ 12.40 ರವರೆಗೆ ಮಹಜರನ್ನು ಜರುಗಿಸಿರುತ್ತಾರೆ. ಸಾಕ್ಷಿ ನಿಪಿ.5 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ.5(ಸಿ) ಎಂದು ಗುರುತಿಸಲಾಯಿತು. ನಿಪಿ.5 ರ ಮಹಜರನ್ನು ನಾನೇ ಬರೆದಿರುತ್ತೇನೆ. ಅಮಾನತ್ತುಪಡಿಸಿಕೊಂಡ ಮಧ್ಯದ ಪೌಚುಗಳನ್ನು ನಮ್ಮ ಕಛೇರಿಗೆ ತೆಗೆದುಕೊಂಡು ಹೋಗಿರುತ್ತೇವೆ. ಈ ಕುರಿತು ನಾನು ಚಾಸಾ.11 ರವರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತನ್ನು ಮತ್ತು ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿಯ ಪರ ಶ್ರೀ ಕೆ.ಪಿ. ವಕೀಲರಿಂದ**

3. ನಾನು ಮತ್ತು ಚಾಸಾ.5 ರವರು ಗಸ್ತು ಕರ್ತವ್ಯಕ್ಕೆ ಹೋಗಲು ಬೆಳಗ್ಗೆ 10 ಗಂಟೆಗೆ ಠಾಣೆಯನ್ನು ಬಿಟ್ಟಿರುತ್ತೇವೆ. ಆರೋಪಿತನು ಗುಂಡೇರಿ ಗ್ರಾಮದ ಪಶ್ಚಿಮ ದಿಕ್ಕಿನಿಂದ ಹಾವಿನಹಟ್ಟಿ ಗ್ರಾಮಕ್ಕೆ ಬರುತ್ತಿದ್ದನು. ಆರೋಪಿತನು ರಸ್ತೆಯಲ್ಲಿ ಬೈಕಿನಲ್ಲಿ ಬರುತ್ತಿದ್ದು, ಅಕ್ಕಪಕ್ಕದಲ್ಲಿ ಯಾವುದೇ ವಾಸದ ಮನೆಗಳು ಇಲ್ಲ. ನಮಗೆ ಚಾಸಾ.1 ಮತ್ತು 2 ರವರು ಲಭ್ಯವಿದ್ದು, ಸದರಿ ಸಮಯದಲ್ಲಿ ಇತರೆ ಯಾರೂ ಇರಲಿಲ್ಲ. ಅಮಾನತ್ತುಪಡಿಸಿಕೊಂಡ ಮಧ್ಯದ ಪೌಚುಗಳ ಉತ್ಪಾದನಾ ದಿನಾಂಕ, ಘಟಕ ಮತ್ತು ಬ್ಯಾಚ್ ಸಂಖ್ಯೆ ಕುರಿತು ಗೊತ್ತಿಲ್ಲ. ಅಮಾನತ್ತುಪಡಿಸಿಕೊಂಡ ಸ್ಥಳದ ಪೂರ್ವಕ್ಕೆ ಹಾವಿನಹಟ್ಟಿಗೆ ಹೋಗುವ ರಸ್ತೆ, ಪಶ್ಚಿಮಕ್ಕೆ ಗುಂಡೇರಿಗೆ ಹೋಗುವ ರಸ್ತೆ, ಉತ್ತರಕ್ಕೆ ಅಡಿಕೆ ತೋಟ ಮತ್ತು ದಕ್ಷಿಣಕ್ಕೆ ಅಡಿಕೆ ತೋಟ ಇದೆ. ಆರೋಪಿತನು ಯಾವುದೇ ತಪ್ಪನ್ನು ಎಸಗದಿದ್ದಾಗ್ಯೂ ಚಾಸಾ.5 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ